ಎಂ.ಎಸ್. ಆಶಾದೇವಿ

# ಪ್ರೇಮಭಿಕ್ಷು ಮಾರ್ಗದ ಹೊಸ ಹುಡುಕಾಟ

'ಅತೀತ'ವನ್ನು ಕುರಿತ ಮನುಷ್ಯನ ಅಭೀಪ್ಸೆ, ಹುಡುಕಾಟ ಆದಿಮವಾದುದು. ಇದರಷ್ಟು ರೋಮಾಂಚಕಾರಿಯಾದ, ರಮ್ಯವಾದ, ದುರ್ಗಮವಾದ ಹುಡುಕಾಟ ಮತ್ತೊಂದಿಲ್ಲವೇನೋ. ಯಾವುದೇ ಸಿದ್ಧ ಮಾದರಿಯೂ ಇಲ್ಲದ, ಮತ್ತೊಬ್ಬರು ನಡೆದ ದಾರಿಯನ್ನು ಹಿಡಿದು ನಡೆಯಲಾಗದ ಕಾರಣಕ್ಕೇ ಅತೀತವೆನ್ನುವುದು ಮನುಷ್ಯರನ್ನು ಇಷ್ಟು ಕಾಡುತ್ತದೋ ಏನೋ? ಅದರ ಅಮೂರ್ತತೆ, ಅದರ ಅತಿಮಾನುಷತೆ ಎರಡೂ ಬಹುದೊಡ್ಡ ಆಮಿಷಗಳು ಮತ್ತು ಸವಾಲುಗಳು. ಅತಿಮಾನುಷತೆಯೂ ಮನುಷ್ಯನ ಮೂಲ, ದುರ್ದಮ್ಯ ಹಂಬಲಗಳಲ್ಲೊಂದು. ಆದ್ದರಿಂದಲೇ ಅತೀತ ಲೋಕದ ವ್ಯಕ್ತಿತ್ವಗಳನ್ನು ಕುರಿತಂತೆ ಕೊನೆಯೇ ಇಲ್ಲದ ಕುತೂಹಲವೊಂದು ನಮ್ಮಲ್ಲಿ ಸದಾ ಇದ್ದೇ ಇರುತ್ತದೆ. ನಂಬಿಕೆಯ ಪ್ರಶ್ನೆ ಆಮೇಲಿನದು. ಕುತೂಹಲವಿಲ್ಲದವರು ವಿರಳ. ಏನೆಲ್ಲ ತಾರ್ಕಿಕ, ಮೂರ್ತ, ವೈಜ್ಞಾನಿಕ, ಚಾರ್ವಾಕ ಪರಂಪರೆಗಳಿದ್ದರೂ ಕುತೂಹಲದ ಆಯಾಮವೊಂದು ಯಾವ ಕಾಲಕ್ಕೂ ಉಳಿದೇ ಇದೆ.

ಇತ್ತೀಚಿನ ಕಾಲದಲ್ಲಿ ಈ ಕುತೂಹಲವು ಇನ್ನೊಂದು ಮುಖ್ಯವಾದ ತಿರುವನ್ನು ಪಡೆದಿದೆ. ಅನುಭಾವ ಪರಂಪರೆಯ ಅನಾವರಣ ಮತ್ತು ಮರು ಓದು ಎರಡೂ ಬಹು ಗಂಭೀರವಾದ ಅಧ್ಯಯನಗಳಿಗೆ ಒಳಗಾಗುತ್ತಿವೆ. ಅವುಗಳನ್ನು ಕುರಿತ ಮುಗ್ಧ ಆರಾಧನೆಯಲ್ಲದ, ಅವುಗಳನ್ನು ನಮ್ಮ ಸಾಂಸ್ಕೃತಿಕ ನಕಾಶೆಯ ಮುಖ್ಯ ನಿಲ್ದಾಣಗಳಾಗಿ ಗುರುತಿಸುವ ಪ್ರಯತ್ನಗಳು ನಡೆಯುತ್ತಿವೆ. ಇದೊಂದು ಬಹಳ ಎಚ್ಚರಿಕೆಯಿಂದ ಮತ್ತು ಜವಾಬ್ದಾರಿಯಿಂದ ಮಾಡಬೇಕಾಗಿರುವ ಕೆಲಸವೆಂದೇ ತೋರುತ್ತದೆ. ಸ್ವಲ್ಪ

'ನನ್ನ ಓದು' ಕನ್ನಡದ ಮುಖ್ಯ ಪುಸ್ತಕಗಳನ್ನು ಪರಿಚಯಿಸುವ ಮಾಲಿಕೆ. ಪ್ರತಿ ತಿಂಗಳು ಬೇರೆ ಬೇರೆ ಓದುಗರು ಹೊಸ ಕನ್ನಡ ಪುಸ್ತಕಗಳ ಬಗ್ಗೆ ಬರೆಯಲಿದ್ದಾರೆ.